# ಆಕರ್ಷಕ ಟ್ರೋಜನ್







ಚಿತ್ರ–ಲೇಖನ: **ಸಂತೋಷ್ ರಾವ್ ಪೆರ್ಮುಡ**

ಮಲಬಾರ್ ಟ್ರೋಜನ್ ವಿಭಿನ್ನ ಮೈಬಣ್ಣದ ಪಕ್ಷಿ. ಕೆಂಪು, ಕೇಸರಿ, ನೀಲಿ, ಕಪ್ಪು, ಬೂದು ಮತ್ತು ಬಿಳಿಯ ಬಣ್ಣಗಳ ಸಮ್ಮಿಶ್ರಣದ್ದು. ಟ್ರೋಜನ್ ಕುಟುಂಬದಲ್ಲೇ ಇವು ಅತ್ಯಂತ ಆಕರ್ಷಕ.

ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ದಟ್ಟಾರಣ್ಯಗಳು, ಪರ್ವತ ಪ್ರದೇಶಗಳಲ್ಲಿ ಹಾಗೂ ಶ್ರೀಲಂಕಾದ ದಟ್ಟಾರಣ್ಯಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಬೇಟೆಗಾರರು ಇದನ್ನು ಹಿಂದಿ ಭಾಷೆಯಲ್ಲಿ ಕಷ್ಣಿಚುರಿ ಮತ್ತು ಕನ್ನಡದಲ್ಲಿ ಕಾಕರಣೆ ಎಂದು ಕರೆಯುತ್ತಾರೆ.

ಒಣಗಿದ ಬೃಹತ್ ಮರ ಮತ್ತು ಒಣ ಕೊಂಬೆಗಳಲ್ಲಿ ಗೂಡು ಕಟ್ಟಿ, ಅಲ್ಲಿಯೇ ಒಮ್ಮೆಗೇ ಮೂರು ಮೊಟ್ಟೆಗಳನ್ನಿಟ್ಟು ಮರಿ ಮಾಡಿಕೊಳ್ಳುತ್ತವೆ. ಕೀಟಗಳು ಹಾಗೂ ಚೆನ್ನಾಗಿ ಕಳಿತ ಹಣ್ಣುಗಳನ್ನು ಮರಿಗಳಿಗೆ ಆಹಾರವಾಗಿ ನೀಡುತ್ತವೆ. ಪ್ರತಿ ಎರಡು ದಿನಗಳಿಗೊಂದರಂತೆ ಮೊಟ್ಟೆಗಳನ್ನಿಡುವ ಇವುಗಳಲ್ಲಿ ಗಂಡು ಹಾಗೂ ಹೆಣ್ಣು ಟ್ರೋಜನ್‌ಗಳು ಕಾವನ್ನು ನೀಡುತ್ತವೆ. ರಾತ್ರಿಯ ಹೊತ್ತು ಹೆಣ್ಣು ಹಕ್ಕಿಯು ಕಾವನ್ನು ನೀಡಿ, ಸುಮಾರು 19 ದಿನಗಳ ಕಾವಿನ ನಂತರ ಮೊಟ್ಟೆಗಳನ್ನು ನಿಧಾನವಾಗಿ ಒಡೆದು ಮರಿಗಳು ಹೊರಬರುವಂತೆ ಮಾಡುತ್ತವೆ. ತಾಯಿಯು ತನ್ನ ಮರಿಗಳಿಗೆ ಆಹಾರವನ್ನು ನೀಡುವ ಪೂರ್ವದಲ್ಲಿ ತನ್ನ ದವಡೆಯಲ್ಲಿ ಆಹಾರವನ್ನು ಕಿವುಚಿ ನಂತರದಲ್ಲಿ ಮರಿಗಳಿಗೆ ತಿನ್ನಿಸುತ್ತವೆ. ಮರಿ ಹಕ್ಕಿಗಳು ಐದರಿಂದ ಆರು ತಿಂಗಳುಗಳ ನಂತರದಲ್ಲಿ ತಾರುಣ್ಯಾವಸ್ಥೆಗೆ ಬಂದು ಹಾರಾಡಲು ಆರಂಭಿಸುತ್ತವೆ.

ಗಂಡು ಪಕ್ಷಿ ಸ್ಲೇಟಿನ ಬಣ್ಣ ಮತ್ತು ಗಾಢ ಕಪ್ಪು ಬಣ್ಣದಿಂದ ಕೂಡಿದ ತಲೆ ಹೊಂದಿರುತ್ತದೆ. ರೆಕ್ಕೆಗಳ ಕಪ್ಪು ಪುಕ್ಕದಲ್ಲಿ ಬಿಳಿ ಬಣ್ಣದ ಗಾಢ ಚುಕ್ಕಿಗಳನ್ನು ಹೊಂದಿರುತ್ತವೆ. ಹೆಣ್ಣು ಟ್ರೋಜನ್‌ಗಳು ಗಂಡು ಪಕ್ಷಿಗಳಿಗೆ ವ್ಯತಿರಿಕ್ತವಾದ ತಿಳಿಕಪ್ಪು ಹಾಗೂ ನಸುಕೆಂಪು ಬಣ್ಣದ ಮೈ ಹೊಂದಿರುತ್ತವೆ. ಎದೆಯ ಭಾಗ ಆಲಿವ್ ಬೂದು ಬಣ್ಣವನ್ನು ಹೊಂದಿರುವುದರಿಂದ ಗಂಡು ಮತ್ತು ಹೆಣ್ಣು ಮಲಬಾರ್ ಟ್ರೋಜನ್‌ಗಳನ್ನು ಸುಲಭವಾಗಿ ಗುರುತಿಸಬಹುದು.